# “ಹೀಗೊಂದು ಸ್ವಗತ...”

ನಮ್ಮೂರು ಚಿಕ್ಕಮಗಳೂರಿನ ಬಸ್‌ಸ್ಟ್ಯಾಂಡಿನಲ್ಲಿ ಆಟೋದಿಂದಿಳಿದು ನಾನೂ ಅಮ್ಮನೂ ಬಸ್‌ಸ್ಟಾಂಡಿನೊಳಕ್ಕೆ ನಡೆಯುತ್ತಿರುವಾಗ ಎದುರುಗಡೆ ನಮ್ಮೂರಿನವರೇ ದೂರದ ಸಂಬಂಧಿಗಳೂ ಆದ ಬಸವೇಗೌಡರು ಸಿಕ್ಕರು. ನಾನೇ ಮಾತನಾಡಿಸಿದೆ. “ಹೇಗಿದೀರಾ ಅಯ್ಯಾ?” ಅವರು, “ಓಹೋ, ಶಿವು? ಗುರುತೇ ಸಿಗೂಲ್ವಲ್ಲೋ ಮಾರಾಯ!” ಎಂದು ಉದ್ಗರಿಸಿ ಕುಶಲೋಪರಿ ವಿಚಾರಿಸಿದರು. ಆಮೇಲೆ ಅಮ್ಮನೆಡೆಗೆ ತಿರುಗಿ “ಸುಂದ್ರಮ್ಮಾ, ನಿನ್ನ ಮಗನಿಗೆ ಒಂದು ಪ್ರೊಪೋಸಲ್ಲು ನನ್ನ ಕಡೆಯಿಂದ ಬರ್ತಾ ಇದೆ! ನಮ್ಮ ನಾಗರತ್ನಳ ಮಗಳು ಮಧುರ ಅಲ್ಲೇ ಬೆಂಗಳೂರಲ್ಲೇ ಸಾಫ್ಟ್‌ವೇರ್ ಎಂಜಿನಿಯರ್ರು...” ಅಮ್ಮ ಹೆಚ್ಚಿನ ಆಸ್ಥೆ ತೋರ್ಪಡಿಸದೇ, ನಿರ್ಲಕ್ಷ್ಯವಾಗಿ “ಅಯ್ಯೋ ಬಿಡಿ ಅಣ್ಣಯ್ಯ, ಯಾರ್ಯಾರ ಹಣೇಲಿ ಯಾವ್ಯಾವ ಹೆಣ್ಣೂ-ಗಂಡೂಂತ ಬರೆದಿರುತ್ತೋ?” ಅಂದಳು. ಬಸವೇಗೌಡರು ಪೆಚ್ಚಾಗಿ, ನಂತರ ಸಾವರಿಸಿಕೊಂಡು ನನ್ನೆಡೆಗೆ ತಿರುಗಿ, “ಓಹೋ, ಊರಿಗೆ ಹೊರಟಿದ್ದೀಯಾ ಅನ್ಸುತ್ತೆ, ಹೋಗಿ ಬಾ, ವಿವರವಾಗಿ ಆಮೇಲ್ಯಾವಾಗಲಾದ್ರೂ ಮಾತನಾಡೋಣ” ಎಂದು ಮೆಲ್ಲನೆ ಕಳಚಿಕೊಂಡರು. ಅಮ್ಮ ಒಂಥರಾ ನಗೆ ನಕ್ಕಳು. ಆಮೇಲೆ ನನ್ನನುದ್ದೇಶಿಸಿ, “ನಮ್ಮ ಸಂಬಂಧದೊಳಗೆ ಹುಡುಗಿ ತಂದುಕೊಳ್ಳೋದು ಬೇಡ ಕಣೋ. ನಮ್ಮೊಳಗೇ ತಂದುಕೊಂಡರೆ ಎಲ್ಲರಿಗೂ ಸಸಾರ. ಅದೇನೋ ಕಂಪ್ಯೂಟರ್‌ನಲ್ಲಿ ನಿನ್ನ ಜಾತಕ ಹಾಕಿ ಹುಡುಗಿ ಹುಡುಕ್ತೀನಿ ಅಂದ್ಯಲ್ಲಾ, ಅಲ್ಲೇ ನೋಡ್ಕೊಂಬಿಡು!” ಅಂದಳು. ನಾನು ನಕ್ಕು, “ಆಯ್ತು ಬಾ” ಅಂತ ಬಸ್‌ಸ್ಟಾಂಡ್ ಹೊಕ್ಕೆ...

ನನ್ನನ್ನು ಬ್ಯಾಗಿನ ಸಮೇತ ಬೆಂಗಳೂರು ಬಸ್ ಹತ್ತಿಸಿ, ವಾಪಸ್ಸು ಹಳ್ಳಿಗೆ ಹೋಗಲು, ತನ್ನ ಗ್ರಾಮೀಣ ಸಾರಿಗೆ ಬಸ್ಸು ಬಂದು ನಿಂತಿದೆಯೆಂದು ನನಗೆ “ಬಾಯ್ ಮಗನೇ!” ಅಂತ್ಹೇಳಿ ಅಮ್ಮ ಹೊರಟುಹೋದಳು. ನಾನು ಇಬ್ಬರು ಕೂರುವ ಎಡಬದಿಯ ಕಿಟಕಿಯ ಸೀಟೊಂದನ್ನು ಹಿಡಿದು ಕುಳಿತೆ. ಬಸ್ಸು ಮೆಲ್ಲನೆ ಭರ್ತಿಯಾಗತೊಡಗಿತ್ತು. ಎರಡು ದಿನದ ರಜೆಗೆ ಬಂದು ಭಾನುವಾರ ಸಂಜೆಗೇ ವಾಪಸ್ಸು ಬೆಂಗಳೂರಿಗೆ ಹೋಗುತ್ತಿದ್ದವರಿಂದ, ನಾಳೆಗೆ ಹಾಸನ, ಚನ್ನರಾಯ ಪಟ್ಟಣದಲ್ಲಿ ವಿವಿಧ ಕೆಲಸಗಳಿಗಾಗಿ ಹೋಗುತ್ತಿದ್ದವರಿಂದ ಬಸ್ಸು ನಿಧಾನವಾಗಿ ತುಂಬಿಕೊಳ್ಳುತ್ತಿತ್ತು. ನನ್ನ ಪಕ್ಕಕ್ಕೆ ಒಬ್ಬ ಯುವತಿ ಬಂದು ಕುಳಿತಳು. ಯುವತಿಯ ಹಿಂದೆ ಅವಳ ಬ್ಯಾಗು ಹಿಡಿದುಕೊಂಡು ಬಂದ ಯುವಕ ಬ್ಯಾಗುಗಳನ್ನೆಲ್ಲ ಮೇಲೆ ರ್‍ಯಾಕಿನೊಳಕ್ಕೆ ಇಟ್ಟು, ಅವಳೆಡೆಗೆ ನೋಡಿ, ನಗಲಾರದ ನಗು ಬೀರಿದ. ಅವಳು ಕೈಯಲ್ಲಿದ್ದ ಕರ್ಚೀಫನ್ನು ಕಣ್ಣೀರಿನಿಂದ ಒದ್ದೆ ಮಾಡುತ್ತಿದ್ದಳು, ಅವನು ಸುತ್ತ ನೋಡುತ್ತ ಪಿಸುಗುಟ್ಟಿದ, “ಪ್ಲೀಸ್ ಶ್ರವಂತೀ, ಸುಮ್ಮನಿರೂ!” ಅವಳು ಕಷ್ಟಪಟ್ಟು ಕಣ್ಣೀರು ತೊಡೆದು ಅವನನ್ನು ನೋಡಿ ನಗುವ ಪ್ರಯತ್ನ ಮಾಡಿದಳು, “ಬರ್ಲಾ? ಯೋಚನೆ ಮಾಡಬೇಡ, ಯಾವುದಕ್ಕೂ ನಾನಿದೀನಿ” ಅವಳು ಬಿಕ್ಕುತ್ತಲೇ “ಬೈ” ಎಂದಳು. ಅವನು ಅತ್ತ ಕಡೆಯ ಸೀಟಿನಲ್ಲಿ ಕುಳಿತು, ಅವಳ ಕೈಗಳನ್ನು ತನ್ನ ಕೈಗಳಿಗೆ ತೆಗೆದುಕೊಂಡು, ಬಲವಂತವಾಗಿ ಅವಳು ತನ್ನ ಕಣ್ಣುಗಳೊಳಕ್ಕೆ ನೋಡುವಂತೆ ಮಾಡಿ, ಬಿಕ್ಕಳಿಸಲು ವಕ್ರವಾಗುತ್ತಿದ್ದ ಅವಳ ತುಟಿಗಳನ್ನು ನೋಡಿ, ತನ್ನ ಕಣ್ಣುಗಳೊಳಕ್ಕೆ ಕಣ್ಣೀರು ತುಂಬಿಕೊಂಡು, ತುಟಿಯ ಮೇಲೆ ತೋರ್ಬೆರಳನಿರಿಸಿ, ಅಳಬಾರದೆಂಬಂತೆ ಸನ್ನೆ ಮಾಡಿ, ತನ್ನ ದುಃಖ ತಡೆದುಕೊಂಡು ಮೂಗರಳಿಸಿ ನಕ್ಕ. ಆದರೆ ಅವನ ಕಣ್ಣುಗಳಿಂದಲೂ ಕಂಬನಿಗಳುರುಳಿದವು. ಅವನು ಮುಜುಗರಗೊಂಡು “ಬೈ ಕಣೇ” ಹೇಳಿ ದಡದಡನೇ ಇಳಿದೇ ಹೋದ, ಬಸ್ಸು ಹೊರಟಿತು. ಅವಳ ಕಂಗಳೆರಡು ಕೈಯಲ್ಲಿದ್ದ ಕರ್ಚೀಫಿನೊಳಕ್ಕೆ ಹುದುಗಿಕೊಂಡವು, ಹುಡುಗಿ ಜೋರಾಗಿ ಬಿಕ್ಕಳಿಸಿದಳು. ನಾನು ಬಸ್ಸಿನ ಕಿಟಕಿಯಿಂದಾಚೆಗೆ ನೋಡಿದೆ, ಹುಡುಗ ಉರಿಗಣ್ಣಾಗಿ ಕಣ್ಣೀರು ತುಂಬಿದ ಕಣ್ಣುಗಳಿಂದ ಇವಳೆಡೆಗೇ ನೋಡುತ್ತಿದ್ದ...

ಹಾಸನದಲ್ಲಿ ಬಸ್ಸು ನಿಂತಾಗ ಕಣ್ಣುಗಳನ್ನು ಕೈಯಲ್ಲಿದ್ದ ಕರ್ಚೀಫಿನಲ್ಲೇ ಮುಚ್ಚಿಕೊಂಡು ನಿದ್ದೆ ಹೋಗಿದ್ದ ಆ ಯುವತಿಯನ್ನೆಬ್ಬಿಸಿ, ದಾರಿ ಬಿಡಿಸಿಕೊಂಡು ನಾನು ಕೆಳಗಿಳಿದು ಹೋದೆ. ಶೌಚಕ್ಕೆ ಹೋಗಿ ಬಂದು ಬಸ್ಸು ಹತ್ತಿದಾಗ ನನಗೆ ನನ್ನ ಕಿಟಕಿಯೆಡೆಗಿನ ಸೀಟು ಬಿಟ್ಟು ಕೊಡುವವಳಂತೆ ಅವಳು ಇತ್ತ ಸರಿದಳು. ನಾನು “ಪರ್ವಾಗಿಲ್ಲ, ನೀವೇ ಆ ಕಡೆ ಕೂತ್ಕೊಳಿ” ಅಂದೆ. ಅವಳು ಹೆಚ್ಚು ಮಾತನಾಡದೇ ಮೂಗು ಸೊರ್ರೆನ್ನಿಸುತ್ತಲೇ ಅತ್ತ ಸರಿದು ಕುಳಿತು, ಮೆಲ್ಲನೊಂದು ‘ಥ್ಯಾಂಕ್ಸ್’ ಹೇಳಿದಳು. ಬಸ್ಸು ಹಾಸನ ಬಿಟ್ಟು ಹೊರಟಿತು, ಹೊರಗಡೆ ಜೋರಾದ ಮಳೆ ಶುರುವಾಯಿತು. ಹೊರಗಡೆ ದಾರಿಯುದ್ದಕ್ಕೂ ಪೈರು ಬೆಳೆದು ನಿಂತಿದ್ದ ಹೊಲಗದ್ದೆಗಳು, ಮಳೆಗಾಲಕ್ಕೆ ಮಾತ್ರ ಹಸಿರು ಹೊದೆದುಕೊಳ್ಳುವ ಬೋಳು ಬಯಲಿನ ಅಂಚಿನ ಗುಡ್ಡಗಳು, ಅವುಗಳ ಮೇಲೆ ಸರಕಾರದವರು ನೆಡಿಸಿರುವ ನೀಲಗಿರಿ ಮರದ ತೋಪುಗಳು, ಅವುಗಳೊಳಕ್ಕೆ ಹರಿದುಕೊಂಡು ಬಿದ್ದಿರುವ ಬೂದಿ ಬಣ್ಣದ ಮೋಡಗಳು, ಆಗಾಗ ಬರುವ ರಸ್ತೆಯ ತಿರುವುಗಳು, ತಿರುವುಗಳ ಮೋರಿಯಲ್ಲಿ ನೀರಿನ ಸಣ್ಣ ದಬದಬೆಗಳು, ಕಿಟಕಿಯ ಗಾಜಿನ ಮೇಲೆ ಇಳಿಯುತ್ತಿದ್ದ ಮಳೆನೀರು... ಅವುಗಳನ್ನೆಲ್ಲ ನೋಡುತ್ತ ಅವಳು ಏನನ್ನೋ ನೆನಪಿಸಿಕೊಂಡು ಮತ್ತೊಮ್ಮೆ ಗಂಟಲುಬ್ಬಿಸಿ ಬಿಕ್ಕಿದ್ದಳು. ನಾನು ಕೇಳಿದೆ, “ಇನ್ನೂ ಅಳ್ತಾ ಇದೀರೇನ್ರೀ?” ಅವಳು ಸುಮ್ಮನೆ ಕಣ್ಣು ಮೂಗು ಒರೆಸಿಕೊಂಡಳು, ನಾನು ಮತ್ತೆ ಕೇಳಿದೆ, “ಯಾಕ್ರೀ ಅಳ್ತಾ ಇದೀರಾ? ಚಿಕ್ಕಮಗಳೂರಿಗೆ ಮತ್ತೆ ಬರೋದಿಲ್ವೇ? ಅವ್ರನ್ನ ನೋಡೋದಿಲ್ವೇ?” ಗಟ್ಟಿಯಾಗಿ ಹೆಣೆದು ಕಟ್ಟಿಕೊಂಡಿದ್ದ ಜಡೆಯನ್ನು

ಬಿಚ್ಚಿ, ಸಿಕ್ಕು ಬಿಡಿಸಿ ಹರಡುವಂತೆ ಮೆಲ್ಲಮೆಲ್ಲನೆ ಶುರುವಾದ ನಮ್ಮ ಸಂಭಾಷಣೆ ಅಪರಿಚಿತತೆಯ ಸಂಕೀರ್ಣತೆಯನ್ನು ದಾಟಿ ಹರವಾಯಿತು, ಹಗುರವಾಯಿತು, ಸುಲಭಸಾಧ್ಯವಾಯಿತು...

ಅವಳ ಹೆಸರು ಶ್ರವಂತಿ, ಆ ಹುಡುಗ ಸತೀಶ್. ಚಿಕ್ಕಮಗಳೂರು ಶ್ರವಂತಿಯ ಅಮ್ಮನ ತವರು ಮನೆ. ಬೆಂಗಳೂರಿನ ಶ್ರವಂತಿ ಇಲ್ಲೇ ಅಜ್ಜಿಯ ಮನೆಯಲ್ಲಿದ್ದು ಬಿಯೆಸ್ಸಿ ತನಕ ಓದಿದ್ದಾಳೆ, ಸತೀಶ್ ಅವಳ ಅಜ್ಜಿಯ ಮನೆಯಲ್ಲಿ ಐದು ವರ್ಷದಿಂದ ಬಾಡಿಗೆಗಿರುವ ಹುಡುಗ, ಇವಳ ಜೀವದ ಜೀವ. ಇವಳದೇ ಕಾಲೇಜಿನಲ್ಲಿ ಎರಡು ವರ್ಷಕ್ಕೆ ಸೀನಿಯರ್. ಬೀಯೇ ಮುಗಿಸಿ, ತನ್ನದೇ ಊರಾದ ಶಿವಮೊಗ್ಗದಲ್ಲಿ ಎಮ್ಮೆ ಓದಿ, ಮತ್ತೆ ಬಿಯೆಡ್ ನೆಪ ಹೇಳಿಕೊಂಡು ಚಿಕ್ಕಮಗಳೂರಿಗೆ ಬಂದಿದ್ದಾನೆ, ಬಿಯೆಡ್ ಓದುತ್ತಿದ್ದಾನೆ. ಗಂಡು ಮಕ್ಕಳಿಲ್ಲದ ಇವಳ ಅಜ್ಜ ಅಜ್ಜಿಯರಿಗೆ, ಅವರ ಮನೆಯ ವ್ಯವಹಾರಗಳಿಗೆ ಸತೀಶ್‌ನೇ ಆಧಾರ, ಈಗಿವಳು ಬಿಯೆಸ್ಸಿ ಮುಗಿಸಿ ವಾಪಸ್ಸು ಬೆಂಗಳೂರಿನ ತನ್ನ ಮನೆಗೆ ಹೊರಟಿದ್ದಾಳೆ...

ಚನ್ನರಾಯಪಟ್ಟಣದಲ್ಲಿ ನಮ್ಮ ಮುಂದಿದ್ದ ಸೀಟಿನಲ್ಲಿದ್ದವರು ಇಳಿದು, ಅಲ್ಲಿಗೆ ಮೂರ್ನಾಲ್ಕು ವರ್ಷದ ಒಂದು ಹೆಣ್ಣು ಮಗು ಮತ್ತು ಅವರಮ್ಮ ಬಂದು ಕುಳಿತರು. ಬಸ್ಸು ಪಟ್ಟಣ ದಾಟುತ್ತಲೂ ಹೆಣ್ಣುಮಗು ಸೀಟಿನ ಮೇಲೆ ಎದ್ದು ನಿಂತು ಹಿಂತಿರುಗಿ ನಮ್ಮನ್ನು ನೋಡಿತು, ಅವರಮ್ಮ, "ಸೀಟ್ ಮೇಲೆ ಕೂತ್ಕೋ ನಮಿತಾ, ಬೀಳ್ತೀಯಾ!" ಎನ್ನುತ್ತಿದ್ದರೂ ಲೆಕ್ಕಿಸದೇ ಅರೆನಾಲಿಗೆ ಹೊರಚಾಚಿ, ನಮ್ಮೆಡೆಗೆ ಕಿರುನಗು ಬೀರಿತು. ಶ್ರವಂತಿ ಕೈಚಾಚಿ, "ಇಲ್ಲಿ ಬಾ ಪುಟ್ಟಾ" ಎಂದು ಕರೆದಳು. ನಾನು "ನನ್ನ ಹತ್ತಿರ ಬಾ" ಎಂದೆ. ಅದು ಸೀಟು ದಾಟಿ ಬರಲು ಯತ್ನಿಸುವುದನ್ನು ನೋಡಿ ಅವರಮ್ಮ ಹಿಂತಿರುಗಿ ನಮ್ಮನ್ನು ನೋಡಿ, "ಸೀಟ್ ಇಳುದ್ಬಿಟ್ ಹೋಗು ನಮಿತಾ" ಎಂದು ಹೇಳಿದರು. ನಾನು ನಮಿತಾಳನ್ನು ಕರೆದು ನನ್ನ ತೊಡೆ ಮೇಲೆ ಕೂರಿಸಿಕೊಂಡೆ. ನನ್ನ ಮೊಬೈಲ್ ಅವಳ ಕೈಗೆ ಆಟಿಕೆಯಾಯಿತು. "ನಿನ್ ಹೆಸರೇನು ಪುಟ್ಟೀ?" ಅವಳು ತನ್ನ ಪುಟ್ಟ ಪುಟ್ಟ ಬೆರಳುಗಳಿಂದ ಮೊಬೈಲ್‌ನ ಗುಂಡಿಗಳನ್ನು ಅದುಮುವುದರಲ್ಲಿ ಮಗ್ನಳಾಗಿದ್ದಳು. ಅವರಮ್ಮ ಹಿಂತಿರುಗಿ, "ಮಾಮ ಹೆಸರು ಕೇಳ್ತಿದಾರೆ ಹೇಳೇ." ಅವಳು ಅನ್ಯ ಮನಸ್ಕಳಾಗಿಯೇ "ಮ್... ನಮಿತ" ಅಂದಳು...

ನಾನೂ ಶ್ರವಂತಿಯೂ ಸೇರಿಕೊಂಡು ನಮಿತಾಳೊಡನೆ ಆಟವಾಡಿದೆವು. ಅವಳ ಕಣ್ಣುಗಳನ್ನು ಮುಚ್ಚಿ, ಅವಳ ತೋರ್ಬೆರಳಿನಿಂದ ನಮ್ಮ ಮೂಗು ಮುಟ್ಟುವಾಟ, ಅವಳು ಕಲಿತ 'ಎಬಿಸಿಡಿ', ಅಂಗೈ ಮೇಲೆ ಬೆರಳಿನಲ್ಲಿ ಸುರಳಿ ಸುತ್ತಿಸಿ, ಅವಳ ಕಂಕುಳ ತನಕ ಗೆರೆಯೆಳೆದು ಕಚಗುಳಿಯಿಡುವ 'ಒಂದೊಂದವರೆ' ಆಟ, ನನ್ನ ಮೊಬೈಲ್‌ನಲ್ಲಿದ್ದ ಫೋಟೋಗಳು, ವಿವಿಧ ಟ್ಯೂನ್‌ಗಳು, ಅದಕ್ಕೆಲ್ಲ ನಮ್ಮ ಒತ್ತಾಯದ ಮೇರೆಗೆ ನಮಿತಾಳ ಹುಬ್ಬು ಕುಣಿಸಿ ಮೈನುಲಿಸುವ ನೃತ್ಯ, ಅವಳ ಕೇಕೆ–ನಗುವಿನ ಫೋಟೋ ಸೆಶನ್, ನನ್ನ ಕರವಸ್ತ್ರದಲ್ಲಿ, ಮೂರ್ಖತನದ್ದೆನಿಸುವ ಖೊಟ್ಟಿ ಜಾದೂಗಳು, ಅವಳಿಗೆ ಶ್ರವಂತಿ ಹೇಳಿಕೊಟ್ಟ 'ಬಾ ಬಾ ಬ್ಲಾಕ್ ಶೀಪ್', ಅವಳ ಪ್ರಶ್ನೆಗಳು, ತೊದಲು ಉತ್ತರಗಳು, ಮುತ್ತುಗಳು... ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ಶ್ರವಂತಿ ನಗುತ್ತಿದ್ದಳು, ಕೆನ್ನೆ ಮೇಲೆ ಕರೆಗಟ್ಟಿದ್ದ ಕಣ್ಣೀರನ್ನು ಯಾವಾಗಲೋ ಒರೆಸಿಕೊಂಡಿದ್ದಳು, ಜಡೆಯನ್ನು ಮೇಲಕ್ಕೆತ್ತಿ, ತಲೆಗೂದಲನ್ನೆಲ್ಲ ನೇವರಿಸಿಕೊಂಡು ಕ್ಲಿಪ್ ಹಾಕಿಕೊಂಡಿದ್ದಳು. ನಡುನಡುವೆ ತನ್ನ ಮೊಬೈಲ್‌ಗೆ ಬಂದ ಎಸ್ಸೆಮ್ಮೆಸ್‌ಗಳಿಗೆ ಕೆನ್ನೆ ಕೆಂಪಾಗಿಸಿಕೊಂಡು ನಮಿತಾಳ ಕೀಟಲೆಯ ನಡುವೆಯೂ ಉತ್ತರ ಟೈಪಿಸಿದಳು,..

ಬೆಳ್ಳೂರು ಕ್ರಾಸಿನಲ್ಲಿ ನಮ್ಮ ಬಸ್ಸು ಹತ್ತು ನಿಮಿಷದ ವಿರಾಮಕ್ಕೆ ನಿಂತಾಗ ನಾನು ಶ್ರವಂತಿಯನ್ನು ಕಾಫಿ ಕುಡಿಯಲು ಕರೆದೆ. ಅವಳು ಬರೋಲ್ಲ ಅಂದಳು. ನಮಿತಾಳನ್ನು ನಾನು ಕರೆದಾಗ ಅವಳು ಮುದುಡಿಕೊಂಡದ್ದನ್ನು ನೋಡಿ ಅವರಮ್ಮ ನಕ್ಕರು. "ಇಳಿದುಹೋದರೆ, ಅವಳನ್ನು ಬಿಟ್ಟು, ಅಮ್ಮನನ್ನು ಕರೆದುಕೊಂಡು ಬಸ್ಸು ಹೋಗಿಬಿಡುತ್ತೆ ಅನ್ನೋ ಹೆದರಿಕೆ ಅವಳಿಗೆ!" ನಾವೆಲ್ಲ ನಕ್ಕೆವು, ನಾಚಿಕೆಯಾಗಿ ಅವಳು ಕೆನ್ನೆಯೂದಿಸಿಕೊಂಡಳು. ನಾನು ಇಳಿದು ಎದುರಿಗಿದ್ದ ಅಂಗಡಿಯಲ್ಲಿ ಚಾಕೋಲೇಟ್ ತೆಗೆದುಕೊಂಡು, ಹೋಟೇಲಿನೊಳಕ್ಕೆ ಹೋಗಿ ಕಾಫಿ ಬೇಡವೆಂದುಕೊಂಡು ನೀರು ಕುಡಿದು ಹೊರಬರುವಷ್ಟರಲ್ಲಿ ಶ್ರವಂತಿ ಬಸ್ಸಿಳಿದು ಬಂದು ಅಂಗಡಿಮುಂದೆ ನಿಂತಿದ್ದಳು. "ಬನ್ನಿ, ಎಳನೀರು ಕುಡಿಯೋಣ" ಎಂದು ಕರೆದಳು. ನಾವಿಬ್ಬರೂ ತೆಳುಗಂಜಿಯ ಎಳನೀರು ಕುಡಿದೆವು. ಒತ್ತಾಯ ಮಾಡಿ ದುಡ್ಡು ಅವಳೇ ಕೊಟ್ಟಳು. ನಾನು ಸುಮ್ಮನೇ ಮಾತು ತೆಗೆದೆ. "...ಮತ್ತೆ? ಸತೀಶ್ ಯಾವಾಗ ಬರ್ತಾರೆ ಬೆಂಗಳೂರಿಗೆ? ನೀವು ಯಾವಾಗ ಬರ್ತೀರಾ ಚಿಕ್ಕಮಗಳೂರಿಗೆ?" ಅವಳು ಇಳಿಮುಖ ಹಾಕಿಕೊಳ್ಳದೇ "ಗೊತ್ತಿಲ್ಲ, ಈಗ ತಾನೇ ಬಿಯೆಡ್ ಮುಗೀತಾ ಇದೆ, ಆಮೇಲೆ..." ಮಾತನಾಡುತ್ತಿದ್ದಂತೆಯೇ ಅವಳ ಮುಖ ಚಿಕ್ಕದಾಯಿತು. "...ಹೆದರಿಕೊಳ್ಬೇಡಿ, ಎಮ್ಎ, ಬಿಯೆಡ್ ಅಂದ್ರೆ ಕೆಲಸ ಸಿಕ್ಕೇ ಸಿಕ್ಕುತ್ತೆ. ಕೆಲಸದ ಹುಡುಗ ಅಂದ್ರೆ ಮನೇನಲ್ಲೂ ಒಪ್ಪುತ್ತಾರೆ..." ನನ್ನ ಸಾಂತ್ವನಕ್ಕೆ ಅವಳು ಕೊಂಡಿ ಹಾಕಿದಳು, "ಆದ್ರೆ ನಾವಿಬ್ಬರೂ ಬೇರೆ ಜಾತಿ..."

ನಾವಿಬ್ಬರೂ ಬಸ್ಸು ಹತ್ತಿದೆವು. ಬಸ್ಸು ಹೊರಟ ಮೇಲೆ ಮುಂದಿನ ಸೀಟಿನಲ್ಲಿದ್ದ ನಮಿತಾ ಸೀಟಿನಿಂದೆದ್ದು ನಿಂತು ನಮ್ಮೆಡೆಗೆ ನೋಡಿ ನಕ್ಕಳು, ಅವಳ ಕೈಯಲ್ಲಿ ಚಿಪ್ಸ್ ಪಾಕೆಟ್. ನಾನು ತಂದಿದ್ದ ಪಾಪಿನ್ಸ್‌ನ ಪ್ಯಾಕನ್ನು ಅವಳ ಮುಂದೆ ಹಿಡಿದೆ, ಶ್ರವಂತಿ ಕೂಡ ಅವಳಿಗೇನೋ ಕೊಡಲು ಕೈಚಾಚಿದಳು, ನೋಡಿದರೆ ಅವಳ ಕೈಯಲ್ಲೂ ಪಾಪಿನ್ಸ್! ಅವಳು ತಟ್ಟನೆ "ಟಚ್‌ವುಡ್!" ಅಂದಳು. ನಮ್ಮ ಈ ಗೊಂದಲದಿಂದ ಅವಳಿಗೇನು ಅರ್ಥವಾಯಿತೋ, ನಮಿತಾ ನಮ್ಮಿಬ್ಬರೆಡೆಗೂ ನೋಡಿ ಕಿಲಕಿಲ ನಕ್ಕಳು. ಅವರಮ್ಮ "ಏನಮ್ಮಾ

ಅದು?" ಅಂತ ಅವಳ ಕೈ ನೋಡಿದರು, ಅವಳ ಕೈನಲ್ಲಿ ಎರಡೆರಡು ಪಾಪಿನ್ಸ್ ಪಾಕೆಟ್‌ಗಳು! ಅವರು ನಮ್ಮಿಬ್ಬರೆಡೆಗೂ ತಿರುಗಿ "ನೀವು ಇಷ್ಟೊಂದೆಲ್ಲ ಚಾಕಲೇಟ್ ಕೊಡ್ಸೋದಾದ್ರೆ ನಿಮ್ಮನೇಗೆ ಬರ್ತಾಳೆ, ಕರ್ಕೊಂಡ್ ಹೋಗಿ" ಅಂದು ಅವಳನ್ನುದ್ದೇಶಿಸಿ, "ಅವರ ಮನೆಗೆ ಹೋಗ್ತೀಯಾ ನಮಿತಾ?" ಅಂತ ಕೇಳಿದರು. ಅವಳು ಹೂಂಗುಟ್ಟುತ್ತ ಪಾಪಿನ್ಸ್‌ನ ಪ್ಯಾಕೆಟ್ ತೆರೆಯಲು ಯತ್ನಿಸಿದಳು, ನಾನು ಅವಳ ಕೈಯಿಂದ ಒಂದು ಪಾಪಿನ್ಸ್‌ನ ಪ್ಯಾಕೆಟ್ ತೆಗೆದುಕೊಂಡು, ತೆರೆದು, ಅವಳ ಬಾಯಿಗೆ ಒಂದು ಪಾಪಿನ್ಸ್ ಹಾಕಿದೆ, ನಂತರ ಅವಳನ್ನೇ ಕೇಳಿದೆ, "ನಾನೂ ಒಂದು ತಗೊಳ್ಲಾ ನಮಿತಾ?" ಅವಳು ಹೂಂಗುಟ್ಟ ಮೇಲೆ ಶ್ರವಂತಿಗೆ ಒಂದು ಪಾಪಿನ್ಸ್ ಕೊಟ್ಟು, ನಾನೂ ಒಂದು ಬಾಯಿಗೆ ಹಾಕಿಕೊಂಡು ಉಳಿದ ಪ್ಯಾಕೆಟನ್ನು ಅವಳ ಕೈಗೇ ಇಟ್ಟೆ. ಅವಳು ಆಗಲೇ ಬಾಯಲ್ಲಿದ್ದ ಪಾಪಿನ್ಸ್‌ನ್ನು ಚೀಪದೇ ಕಡಿಯಲಾರಂಭಿಸಿದಳು, ನಾನು ಪ್ಯಾಕೆಟ್ ಕೊಡುತ್ತಲೂ, ತೆಗೆದುಕೊಂಡು 'ಇದ್ಯಾಕೋ ನಷ್ಟದ ವ್ಯವಹಾರ' ಎಂದುಕೊಂಡವಳಂತೆ ಅತ್ತ ತಿರುಗಿ ಕುಳಿತಳು. ನಾನು ಮೆಲ್ಲನೆ ನನ್ನ ತೊಡೆಯ ಮೇಲಿದ್ದ ಪುಸ್ತಕ ಕೈಗೆತ್ತಿಕೊಂಡೆ.

"ತುಂಬಾ ಓದ್ತೀರಾ ಅನ್ಸುತ್ತೆ?" ಶ್ರವಂತಿ ಕೇಳಿದಳು.

"ಹೂಂ... ಆರಾರು ಗಂಟೆ ಬಸ್‌ನಲ್ಲಿ ಪ್ರಯಾಣ ಮಾಡಬೇಕಲ್ಲ, ಒಬ್ಬನೇ ಬೇರೆ, ಬೇಜಾರಾಗುತ್ತೆ ಅಂತಾ..."

"ಹೇಳಿ, ನಿಮ್ಮ ಮೆಚ್ಚಿನ ಲೇಖಕ ಯಾರು?"

"ಡೀನ್ ಕೂಂಟ್ಸ್ ಅಂತಾ" ನನ್ನ ಉತ್ತರಕ್ಕೆ ಅವಳ ಮತ್ತೊಂದು ಪ್ರಶ್ನೆ ತಯಾರಾಗಿತ್ತು, "ಈ ಬುಕ್ ಬರೆದಿರೋನೂ ಅವನೇನಾ?"

"ಹೌದು?" "ಹೇಳಿ, ನಿಮಗ್ಯಾಕೆ ಅವನು ಇಷ್ಟ?" ನಾನು ಪುಸ್ತಕ ಮುಚ್ಚಿಟ್ಟು, ಅವಳಿಗೆ ವಿವರಣೆ ಕೊಟ್ಟೆ. ಅವಳು ಆಸ್ಥೆಯಿಂದ ಕೇಳಿದ್ದು ನೋಡಿ ನನಗೂ ಹುಮ್ಮಸ್ಸು ಬಂತು. ನಾನು ಈಗಾಗಲೇ ಓದಿದ್ದ ಡೀನ್ ಕೂಂಟ್ಸ್‌ನ ಕಾದಂಬರಿಯೊಂದರ ಕತೆ ಹೇಳಿದೆ, ಅವಳು ಕೇಳಿಸಿಕೊಂಡು, ಕೊನೆಗೆ "ತುಂಬಾನೆ ಚೆನ್ನಾಗಿದೆ" ಅಂತ ತೀರ್ಮಾನ ಕೊಟ್ಟಳು. ಆಮೇಲೆ, "ನೋಡಿ, ಸುಮ್ನೇ ನಿಮಗೆ ಓದೋಕೇ ಬಿಡಲಿಲ್ಲ, ತುಂಬಾನೇ ಡಿಸ್ಟರ್ಬ್ ಮಾಡಿದೆ ಅನ್ಸುತ್ತೆ, ಓದ್ಕೊಳ್ಳಿ" ಎಂದು ಮೆಲ್ಲನೆ ಅತ್ತ ತಿರುಗಿ ಕಣ್ಣು ಮುಚ್ಚಿಕೊಂಡಳು, ನಾನು ಮತ್ತೆ 'ಫಾಲ್ಸ್ ಮೆಮೋರಿ'ಯ ನೂರರವತ್ತಮೂರನೆಯ ಪುಟ ತೆಗೆದು ಓದಿಕೊಳ್ಳಲಾರಂಭಿಸಿದೆ...

ಎಡೆಯೂರು ಬಂತು, ನನ್ನ ಮೊಬೈಲ್ ರಿಂಗಣಿಸಿತು. ತೆಗೆದು ನೋಡಿದೆ, ಪರದೆಯ ಮೇಲೆ ನನ್ನೊಬ್ಬ ಸ್ನೇಹಿತ 'ಶೇಖರ್'ನ ಹೆಸರು. "ಹಲೋ" ಅಂದೆ. "ಹಲೋ, ಎಲ್ಲಿದೀಯೋ?"

ನಾನು ಎಲ್ಲವನ್ನೂ ವಿವರವಾಗಿ ಹೇಳಿ, "ಏನಪ್ಪಾ ಇದ್ದಕ್ಕಿದ್ದಂತೇ ಫೋನ್ ಮಾಡಿದೀಯಾ?" ಅಂತ ಕೇಳಿದೆ. ನಾನೆಣಿಸಿದಂತೆಯೇ ಅವನ ಪ್ರಶ್ನೆ ಬಂತು. "ವಿಶೇಷ ಹೇಳೇ ಇಲ್ಲ ನನಗೆ?"

ಏನೂ ಅರಿಯದವನಂತೆ "ಏನು?" ಅಂದೆ. "ಹಾಗಾದ್ರೆ ವಿಷಯ ಗೊತ್ತಿಲ್ವಾ ನಿನಗೆ?" ನಂಬದ ಧ್ವನಿ ಅವನದು.

"ಏನು ಅಂತ ಹೇಳಿದ್ರೆ ಗೊತ್ತಿದೆಯೋ ಇಲ್ವೋ ಹೇಳಬಹುದಪ್ಪಾ" ನಾನು ಪಟ್ಟು ಬಿಡಲಿಲ್ಲ.

ಅವನು ಕೊನೆಗೂ ಕೇಳಿದ, "ಸುಮನ್ ಮದುವೆಯಾಗ್ತಿದಾನಂತೆ?" ನಾನು "ಹೌದು!" ಅಂದೆ.

"ಹುಡುಗಿ ಯಾರು?" ನನಗೇ ಅಚ್ಚರಿಯಾಗುವಷ್ಟು ನಿರ್ಲಿಪ್ತ ಧ್ವನಿಯಲ್ಲಿ ಹೇಳಿದೆ, "ಇನ್ನ್ಯಾರು? ನೇಹಾ!" ನನ್ನ ನಿರ್ಲಿಪ್ತತೆ ನನಗಿಂತ ಅವನಿಗೇ ತಾಕಿತು ಅನಿಸಿತು, ತಟ್ಟನೆ ನುಡಿದ, "ಓಹ್! ಪರವಾಗಿಲ್ಲ ಕಣೋ, ಅಷ್ಟನ್ನಾದ್ರೂ ಹೇಳಿದೆಯಲ್ಲ!"

"ಹೇಳದೇ ಇರೋಕೆ ಏನಿದೆ ಅದ್ರಲ್ಲಿ?" ನನ್ನ ನಿರ್ಲಿಪ್ತತೆಯ ಕೊನೆಯ ಕೊಂಡಿ ಕಳಚಿಕೊಳ್ಳುತ್ತಿತ್ತು.

"ಹಾಗಲ್ಲ! ನೇಹಾ ಬಗ್ಗೆ ನೀನು ಅಷ್ಟೊಂದೆಲ್ಲ ಕನಸು ಕಂಡೂ, ಅವೆಲ್ಲ ನಿನ್ನ ಬೆಸ್ಟ್ ಫ್ರೆಂಡ್ ಒಬ್ಬನಿಗೆ ನನಸುಗಳಾಗುತ್ತಿವೆ ಅಂತ ಗೊತ್ತಾಗಿಯೂ... ಗುಡ್!" ಅವನು ನಿಜವಾಗಿಯೂ ಹೃದಯ ಪೂರ್ವಕವಾಗಿ ನನ್ನ ನಿರ್ಲಿಪ್ತತೆಯನ್ನು ಮೆಚ್ಚಿಕೊಂಡಂತೆ ಕಾಣಿಸಿತು...

ಅವನೊಡನೆ ಮಾತು ಮುಗಿಸಿ, ಸುಸ್ತಾದವನಂತೆ ನಿಟ್ಟುಸಿರು ಬಿಟ್ಟು ಕಿಟಕಿಯಿಂದಾಚೆಗೆ ನೋಡಲಾರಂಭಿಸಿದೆ. ಮತ್ತದೇ ಬೇಸರ, ಖಾಲಿತನ, ಮನಸು-ಹೃದಯವನ್ನಾವರಿಸಿತು. ತಲೆಯೊಳಗೆ ಏನೇನೋ ಯೋಚನೆಗಳ ಕಲಸು ಮೇಲೋಗರ. ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ ಅಂತಾರೆ, ಪ್ರೀತಿ ಇರದುದ್ದೇ ಆಯಿತಲ್ಲ ನನ್ನ ಪಾಲಿಗೆ? ಇರದೇ ಇದ್ದುದನ್ನು ಕಳೆದುಕೊಂಡಿದ್ದೇನೆ ನಾನು! ಇರದೇ ಇದ್ದುದನ್ನು ಕಳೆದುಕೊಳ್ಳುವುದಾದರೂ ಹೇಗೆ? ಅದು ಕಳೆದುಹೋದರೆ ಅದರ ಕೊರತೆಯಾದರೂ ಹೇಗೆ ಗೊತ್ತಾಗುತ್ತದೆ? ಮೊದಲೇ ಇರಲಿಲ್ಲ, ಈಗ ಕಳೆದುಹೋಗಿದೆ...

ಯಶವಂತಪುರದಲ್ಲಿ ನಮಿತಾ ಮತ್ತು ಅವರಮ್ಮ ಇಳಿದರು. ಇಳಿಯುವುದಕ್ಕೂ ಮುನ್ನ ಅವಳು ನನ್ನ ಮತ್ತು ಶ್ರವಂತಿಯ ಮಡಿಲಿಗೆ ಬಂದು ತನ್ನ ಪಾಪಿನ್ಸ್ ಚೀಪಿದ್ದ ತುಟಿಗಳಿಂದ ನಮ್ಮ ಕೆನ್ನೆಗಳಿಗೆ ಎರಡೆರಡು ಸಿಹಿ-ಸಿಹಿ ಮುತ್ತುಗಳನ್ನು ಕೊಟ್ಟಳು, ನಿದ್ದೆಗಣ್ಣಲ್ಲೇ ಟಾಟಾ ಮಾಡಿದಳು. ನಂತರ, ಶ್ರವಂತಿ ಕೇಳಿದಾಗ ಮೇಲಿನಿಂದ ಅವಳದೊಂದು ಬ್ಯಾಗ್ ಇಳಿಸಿಕೊಟ್ಟೆ. ಅವಳೂ ನವರಂಗ್‌ನಲ್ಲಿ ಇಳಿದಳು. ಇಳಿಯುವಾಗ "ತುಂಬಾ ಥ್ಯಾಂಕ್ಸ್ ಶಿವು. ನೀವು ಇದ್ದುದರಿಂದ ಪ್ರಯಾಣ ಮುಗಿದಿದ್ದೇ ಗೊತ್ತಾಗಲಿಲ್ಲ! ನಿಮ್ಮ ಮೊಬೈಲ್ ನಂಬರ್ ಏನು ಹೇಳಿ?" ಎಂದು ನನ್ನ ಮೊಬೈಲ್ ನಂಬರ್ ಕೇಳಿ, ತನ್ನ ಮೊಬೈಲ್‌ಗೆ ತಿನ್ನಿಸಿದಳು. ನಾನು

"ಸತೀಶ್‌ಗೆ ನಾನು ಕೇಳಿದೆ ಅಂತ ಹೇಳಿ, ನಿಮ್ಮ ಪ್ರೀತಿಗೆ ಬೆಸ್ಟ್ ಆಫ್ ಲಕ್" ಅಂದೆ. ಅವಳು, ಯಾಕೋ ಏನೋ, "ಬೆಸ್ಟ್ ಆಫ್ ಲಕ್ ನಿಮಗೂ" ಅಂದು ಇಳಿದಳು, ಹೊರಗೆ ನಿಂತು ಕೈಬೀಸಿದಳು, ನಾನೂ ಕೈಬೀಸಿದೆ...

ಬಸ್ಸು ಮೆಜೆಸ್ಟಿಕ್‌ನ ತಿರುವಿನಲ್ಲಿರುವಾಗ ನಾನು ಸೀಟಿನಿಂದ ಎದ್ದು ಬ್ಯಾಗು ತೆಗೆದುಕೊಂಡೆ. ನನ್ನ ಮೊಬೈಲ್‌ನಲ್ಲಿ ನನ್ನೊಬ್ಬ ಸ್ನೇಹಿತ ಕಳುಹಿಸಿದ ಹೊಸದೊಂದು ಎಸ್ಸೆಮ್ಮೆಸ್ ಬಂತು. ಬ್ಯಾಗನ್ನು ಬೆನ್ನಿಗೆ ಹಾಕಿಕೊಂಡು, ಬಸ್ಸಿಳಿಯುತ್ತ ಎಸ್ಸೆಮ್ಮೆಸ್ ಓದಿದೆ,..

**"ಹುಡುಗ ಹುಡುಗಿಯೆದುರು ಪ್ರೇಮಯಾಚನೆ ಮಾಡಿದ, ಹುಡುಗಿ ಇಲ್ಲವೆಂದಳು.**
**ಅವನು ಸುಮ್ಮನಾದುದನ್ನು ಕಂಡು ಅವರಿವರು ಕೇಳಿದರು, 'ಯಾಕೆ? ಬೇಜಾರಾಗಲಿಲ್ವಾ?'**
**ಅವನೆಂದ, 'ನನಗ್ಯಾಕೆ ಬೇಜಾರು? ನಾನು ನನ್ನನ್ನು ಪ್ರೀತಿಸದೇ ಇದ್ದವರೊಬ್ಬರನ್ನು ಕಳೆದುಕೊಂಡೆ, ಆದರೆ ಅವಳು? ತನ್ನನ್ನು ಎಲ್ಲಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದವನನ್ನು ಕಳೆದುಕೊಂಡಳು!' "**

ಹೌದಲ್ವಾ? ಹೀಗಾದರೂ ಅಂದುಕೊಂಡರೆ ನನ್ನ ಹೃದಯ ನನ್ನ ಮಾತು ಕೇಳೀತು ಅಂದುಕೊಂಡು ಸಿಟಿಬಸ್ ಸ್ಟಾಂಡಿನೆಡೆಗೆ ನಡೆಯುತ್ತ ಈ ಎಸ್ಸೆಮ್ಮೆಸ್ಸನ್ನು ಎಲ್ಲ ಗೊತ್ತಿದ್ದ ನನ್ನ ಸ್ನೇಹಿತನಿಗೆ ಕಳಿಸಿದೆ. ಎರಡೇ ನಿಮಿಷದಲ್ಲಿ ಪ್ರಶ್ನೆಯ ರೂಪದ ಉತ್ತರ ಬಂತು, "ಮ್... ಲೋ, ಹಾಗೆಂದುಕೊಂಡ ಹುಡುಗನ ಹೆಸರೇನು?"

ನಾನು ಉತ್ತರ ಬರೆದೆ, "ಆ ಸಂದೇಶದ ಜೊತೆಗೆ ಇತ್ತು ನೋಡು ಅವನ ಹೆಸರು..."

ಅವನ ಎದೆಯಾಳದ ಹಾರೈಕೆಯ ಪ್ರತ್ಯುತ್ತರ ಬಂತು "ಸುಮ್ನೇ ಬೇಜಾರು ಮಾಡ್ಕೋಬೇಡಾ ಗುರೂ, ನಮಗೂ ಯಾವುದಾದರೊಂದು ಗೂಬೆ ಗಂಟು ಬೀಳುತ್ತೆ."

ನಾನು ನಕ್ಕು ಪ್ರತ್ಯುತ್ತರಕ್ಕೆ ಉತ್ತರ ಬರೆದೆ, "ಹೌದು, ಆದ್ರೆ ನಾನು ಹೆದರ್ತಾ ಇರೋದು ಅದಕ್ಕಲ್ಲ. ತೊಂಭತ್ತು ಪರ್ಸೆಂಟ್ ಭಗ್ನಪ್ರೇಮಿಗಳು ಕ್ಯಾಸನೋವಗಳಾಗಿ ಬಿಡ್ತಾರಂತೆ, ಅದಕ್ಕೇ!" ೨೫ನೇ ನಂಬರ್‌ನ ಸಿಟಿ ಬಸ್ ಹತ್ತಿ, ಸೀಟಿನಲ್ಲಿ ಕೂರುವಷ್ಟರಲ್ಲಿ ನನ್ನ ಪ್ರತ್ಯುತ್ತರದ ಉತ್ತರಕ್ಕೂ ಉತ್ತರ ಬಂತು "ಹ್ಹ ಹ್ಹ ಹ್ಹಾ! ಇದು ತುಂಬಾನೇ ಜಾಸ್ತಿಯಾಯ್ತು..."

## ಹ್ಯಾವ್ ಎ ನೈಸ್ ಡೇ!

**ಕೆ. ಎಸ್. ಶಿವಕುಮಾರ** *ks_shivu@yahoo.com*